ಬಸವರಾಜಪ್ಪನನ್ನು ಸಂಪರ್ಕಿಸಿ ನಿನ್ನ ಹೊಲ ರಸ್ತೆಗೆ ಸಮೀಪದಲ್ಲಿರುವುದರಿಂದ ಸೈಟ್‌ಗಳನ್ನು ನಿರ್ಮಿಸಲು ತಕ್ಕುದಾಗಿದೆ. ಪ್ರತಿಸೈಟ್‌ಗೆ ಹತ್ತು ಲಕ್ಷ ರೂಪಾಯಿಗಳಂತೆ ವ್ಯಾಪಾರ ಕುದರಿಸಲು ತಾನು ಸಿದ್ಧನಿರುವುದಾಗಿ ಹೇಳಿದ್ದು ಊರ ಮುಖಂಡರಿಗೆ ತಿರುಗೇಟು ನೀಡಲು ಬಸವರಾಜಪ್ಪನಿಗೆ ಹತಾರವೊಂದು ಸಿಕ್ಕಂತಾಗಿತ್ತು. ಬಸವರಾಜಪ್ಪನ ಸೈಟ್ ನಿರ್ಮಾಣದ ಯೋಜನೆ ಅವನ ಅಕ್ಕಪಕ್ಕದ ಹೊಲಗಳ ರೈತರಲ್ಲೂ ಆಸೆ ಹುಟ್ಟಿಸಿ ಅವರು ಕೂಡ ರಿಯಾಜ್ ಅಹ್ಮದ್‌ನನ್ನು ಸಂಪರ್ಕಿಸಿ ವ್ಯವಹಾರ ಕುದುರಿಸತೊಡಗಿದರು.

* * *

ರಾಮಚಂದ್ರ ಮೇಷ್ಟ್ರು ಹಲವು ಬಗೆಯಲ್ಲಿ ಬಸವರಾಜಪ್ಪನಿಗೆ ತಿಳಿಹೇಳಲು ಪ್ರಯತ್ನಿಸಿದರೂ ಬಸವರಾಜಪ್ಪನದು ಒಂದೇ ಹಟ. ತನ್ನ ಕೃಷಿ ಭೂಮಿಯನ್ನು ಪುಕ್ಕಟ್ಟೆಯಾಗಿ ಕಬಳಿಸಲು ಹೊಂಚು ಹಾಕಿದವರಿಗೆ ಬುದ್ಧಿ ಕಲಿಸಲೆಂದೇ ಸೈಟುಗಳನ್ನು ನಿರ್ಮಿಸಲು ಪಣತೊಟ್ಟ. ದೇವಸ್ಥಾನಕ್ಕೆ ಬೇಕಾದರೆ ಶಾಲೆ ಹಿಂದಿನ ಸರ್ಕಾರದ ಪಾಳು ಭೂಮಿ ಒದಗಿಸುವ ವ್ಯವಸ್ಥೆ ಮಾಡುವುದಾಗಿ ಮೇಷ್ಟ್ರು ಮಾತುಕೊಟ್ಟರೂ ಬಸವರಾಜಪ್ಪ ತನ್ನ ನಿರ್ಧಾರದಿಂದ ಹಿಂದೆ ಸರಿಯಲಿಲ್ಲ. ಬಸವರಾಜಪ್ಪನ ಜಮೀನಿನ ಅಕ್ಕಪಕ್ಕದ ರೈತರು ಕೂಡ ಆಸ್ಥೆ ತಾಳಿದ್ದು ಕ್ರಮೇಣ ಗ್ರಾಮದ ಕೃಷಿಭೂಮಿ ಕ್ಷೀಣಿಸುವ ಮುನ್ಸೂಚನೆಯಾಗಿ ತೋರಿತು. ವ್ಯವಸಾಯ ಯೋಗ್ಯ ಭೂಮಿ ಕ್ಷಯಿಸುತ್ತಿರುವುದು ರಾಮಚಂದ್ರ ಮೇಷ್ಟ್ರ ಆತಂಕವನ್ನು ಹೆಚ್ಚಿಸಿತು. ಊರಿನ ಕೆಲವು ವಿಚಾರವಂತರನ್ನು ಮತ್ತು ಜಮೀನು ಮಾರಾಟಕ್ಕೆ ಮುಂದಾದ ರೈತರ ಕುಟುಂಬದವರನ್ನು ಒಂದುಗೂಡಿಸಿ ಕೃಷಿಭೂಮಿ ಉಳಿಸಿಕೊಳ್ಳಲು ಮೇಷ್ಟ್ರು ಮುಷ್ಕರ ಆರಂಭಿಸಿದರು. ಊರಿನ ಕೆಲವರಿಗೆ ಮೇಷ್ಟ್ರ ಹೋರಾಟ ವ್ಯರ್ಥ ಪ್ರಯತ್ನದಂತೆ ತೋರಿತು. ಮೇಷ್ಟ್ರ ಮುಷ್ಕರದ ಸುದ್ದಿ ಟಿ.ವಿ ಚಾನೆಲ್ಲುಗಳು ಮತ್ತು ಪತ್ರಿಕೆಗಳ ಮೂಲಕ ರಾಜ್ಯದಾದ್ಯಂತ ಸಾರ್ವಜನಿಕರ ಗಮನ ಸೆಳೆಯಿತು. ವಿರೋಧಪಕ್ಷಗಳು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡವು. ಪ್ರತಿಸ್ಪರ್ಧಿಗಳಿಗೆ ಚುನಾವಣೆಯಲ್ಲಿ ತಮ್ಮನ್ನು ಹಣಿಯಲು ಇದೊಂದು ಹತಾರ ಆಗಬಹುದೆಂದು ಹೆದರಿದ ಅಂದಾನಪ್ಪಗೌಡರು ದೇವಸ್ಥಾನ ನಿರ್ಮಾಣದ ಯೋಜನೆಯನ್ನು ಹಿಂತೆಗೆದುಕೊಂಡಿರುವುದಾಗಿ ಹೇಳಿಕೆ ನೀಡಿದರು.

ಈ ನಡುವೆ ಬಸವರಾಜಪ್ಪನ ಮಗಳು ಸರಸ್ವತಿ ಹೆರಿಗೆಗೆಂದು ತವರಿಗೆ ಬಂದವಳು ಊರಿನ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿ ಇಡೀ ರಾತ್ರಿ ಪ್ರಸವ ವೇದನೆಯಿಂದ ನರಳಿ, ನಸುಕಿನ ಜಾವ ಮಗುವಿಗೆ ಜನ್ಮ ನೀಡಿದಳು. ಹೆರಿಗೆಕೋಣೆಯ ಹೊರಗೆ ಶತಪಥ ಹೆಜ್ಜೆ ಹಾಕುತ್ತಿದ್ದ ಬಸವರಾಜಪ್ಪನಿಗೆ ಕೋಣೆ ಒಳಗಿನಿಂದ ಮಗಳ ನರಳುವಿಕೆ ಕೇಳಿ ಕರಳು ಕತ್ತರಿಸಿದಂಥ ಯಾತನೆಯಾಗಿತ್ತು. ಮಗುವಿನ ಅಳುವಿನ ಧ್ವನಿ ಕಿವಿಗೆ ಬಿದ್ದದ್ದೇ ಅವನ ಮನಸ್ಸಿಗೆ ಸಮಾಧಾನ ಎನಿಸಿತು. ಅಮ್ಮನ ಮಗ್ಗುಲಲ್ಲಿ ಮಲಗಿದ್ದ ಮಗುವನ್ನು ಮುದ್ದಿಸಿ 'ಭಾಳ ತ್ರಾಸಾಯ್ತೇನು ಕೂಸು' ಎಂದು ಕಕ್ಕುಲಾತಿಯಿಂದ ಮಗಳ ತಲೆ ಸವರಿದ. ಇಡೀ ರಾತ್ರಿ ಅನುಭವಿಸಿದ ನೋವಿನ ಛಾಯೆಯ ಒಂದೆಳೆಯೂ ಕಾಣಿಸದೆ ನಿನ್ನೆವರೆಗೂ ಚೆಲ್ಲಾಟದ ಹುಡುಗಿಯ ಕಳೆಯಿದ್ದ ಮುಖದಲ್ಲಿ ಈಗ ಮಾತೃತ್ವದ ಭಾವ ಮನೆಮಾಡಿತ್ತು. 'ಅಪ್ಪಾ ನೋವು ಅಂತ ಹೆಣ್ಣು ಹೆರೋದನ್ನ ನಿಲ್ಲಿಸಿದರ ಈ ಜಗತ್ತು ಹ್ಯಾಂಗ ಮುಂದುವರಿಬೇಕು. ಭೂಮಿತಾಯಿ ನೋವು ಅಂತ ಬೆಳಿ ಬೆಳೆಯೋದನ್ನ ನಿಲ್ಲಿಸಿದಳಂದರ ಉಣ್ಣೊ ಬಾಯಿಗಳ ಗತಿ ಏನು? ಅವಳ ನೋವಿನ ಮುಂದ ನನ್ನ ನೋವೇನೂ ದೊಡ್ಡದಲ್ಲ' ಮಗಳ ಮಾತು ಕೇಳಿ ಬಸವರಾಜಪ್ಪನಿಗೆ ತನ್ನ ತಪ್ಪಿನ ಅರಿವಾಯಿತು.

'ಕೂಸು ನೀ ನನ್ನ ಮಗಳಲ್ಲವ, ನನಗ ನನ್ನ ತಪ್ಪು ತೋರಿಸಿಕೊಟ್ಟ ನನ್ನ ಹಡೆದವ್ವ ನೀ' ಎಂದವನೆ ಮಗುವನ್ನು ಇನ್ನೊಮ್ಮೆ ಮುದ್ದಿಸಿ, ರಾಮಚಂದ್ರ ಮೇಷ್ಟ್ರು ಮುಷ್ಕರ ಕುಳಿತಿದ್ದ ಸ್ಥಳದತ್ತ ಹೊರಟ. ಆಗಷ್ಟೇ 'ವೈಷ್ಣವ ಜನತೋ' ಭಜನೆ ಹಾಡಿ ಮೂಡಣದಲ್ಲಿ ಉದಯಿಸುತ್ತಿದ್ದ ಸೂರ್ಯನಿಗೆ ನಮಸ್ಕರಿಸುತ್ತಿದ್ದ ರಾಮಚಂದ್ರ ಮೇಷ್ಟ್ರಿಗೆ ದೂರದಲ್ಲಿ ಬರುತ್ತಿರುವ ಬಸವರಾಜಪ್ಪ ಕಣ್ಣಿಗೆ ಬಿದ್ದದ್ದೆ ಅವರು ಗೆಲುವಾದರು. ಮೇಷ್ಟ್ರ ಗೆಲುವಿಗೆ ಸಾಕ್ಷಿಯಾಗಲೆಂಬಂತೆ ಸೂರ್ಯ ಕೂಡ ಆತುರಾತುರವಾಗಿ ಮೇಲೇರತೊಡಗಿದ. ●